ಬೇರೆಯವರಿಗೆ ಕೊಡಬೇಕು, ಇಲ್ಲವಾದಲ್ಲಿ ಈ ಬೂತನ್ನು ಮದರ್ ಡೈರಿಯ ವತಿಯಿಂದಲೇ ನಡೆಸಲು ಏರ್ಪಾಡು ಮಾಡಬೇಕೆಂದು ಮಾನ್ಯ ಪಶುಸಂಗೋಪನಾ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :– ಮಾನ್ಯ ಉಪಾಧ್ಯಕ್ಷೆಯವರೆ ಮಾನ್ಯ ಪಶುಸಂಗೋಪನಾ ಸಚಿವರಿಂದ ಉತ್ತರವನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡಲು ಏರ್ಪಾಟು ಮಾಡುತ್ತೇನೆ.

(4) ಬೆಂಗಳೂರಿನ ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ಆಯ್ಕೆಯಾದ ಕ್ಲರ್ಕ್–ಕಂ–ಟೈಪಿಸ್ಟ್‌ಗಳಿಗೆ ನೇಮಕಾತಿ ಆಜ್ಞೆಯನ್ನು ಹೊರಡಿಸದಿರುವ ಬಗ್ಗೆ.

ಶ್ರೀ ಎಂ. ನಾರಾಯಣಸ್ವಾಮಿ :– ಮಾನ್ಯ ಉಪಾಧ್ಯಕ್ಷೆಯವರೆ, ಬೆಂಗಳೂರಿನ ಕಿದ್ವಾಯಿ ಗ್ರಂಥಿ ಸಂಸ್ಥೆಯಲ್ಲಿ ಫೆಬ್ರುವರಿ 1990ರಲ್ಲಿ ಕ್ಲರ್ಕ್ – ಕಂ – ಟೈಪಿಸ್ಟ್ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆದು ಆಯ್ಕೆ ಪಟ್ಟಿಯನ್ನು ಪ್ರಕಟಿಸಿರುತ್ತಾರೆ. ಆದರೆ ಆಯ್ಕೆಗೊಂಡ ಎಲ್ಲಾ ಅಭ್ಯರ್ಥಿಗಳಿಗೆ ಹಾಗೂ ವೈಟಿಂಗ್ ಲಿಸ್ಟ್‌ನಲ್ಲಿ ಇರತಕ್ಕ ಅರ್ಹ ಅಭ್ಯರ್ಥಿಗಳಿಗೆ ಇನ್ನೂ ನೇಮಕಾತಿ ಆಜ್ಞೆಯನ್ನು ಕಳುಹಿಸಿಲ್ಲ. ಈ ಸಂಸ್ಥೆಯಲ್ಲಿ ಹಲವಾರು ಹುದ್ದೆಗಳು ಖಾಲಿ ಇವೆ. ಹಾಗೂ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಲು ಈ ಸಂಸ್ಥೆಯವರು ಕ್ರಮ ಕೈಗೊಳ್ಳುತ್ತಿರುವುದರಿಂದ ಈಗಾಗಲೇ ಆಯ್ಕೆಗೊಂಡಿರುವ ಎಲ್ಲಾ ವೈಟಿಂಗ್ ಲಿಸ್ಟ್‌ನಲ್ಲಿ ಇರತಕ್ಕ ಅಭ್ಯರ್ಥಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವುದರಲ್ಲಿ ಯಾವುದೇ ತೊಂದರೆ ಇಲ್ಲ. ಎಲ್ಲಕ್ಕಿಂತ ಮುಖ್ಯವಾಗಿ ಹಲವಾರು ವರ್ಷಗಳಿಂದ ನಿರುದ್ಯೋಗಿಗಳಾಗಿದ್ದು ಬಹಳ ಕಷ್ಟದಿಂದ ಈ ಸಂಸ್ಥೆಯಲ್ಲಿ ನಡೆಸಿದ ಸಂದರ್ಶನದಲ್ಲಿ ತೇರ್ಗಡೆಯಾಗಿ ವೈಟಿಂಗ್ ಲಿಸ್ಟ್‌ನಲ್ಲಿ ಇರತಕ್ಕ ಬಡ ಅಭ್ಯರ್ಥಿಗಳು ಈಗ ವಯೋಮಿತಿಯನ್ನು ಮೀರುವ ಅಂಚಿನಲ್ಲಿದ್ದಾರೆ. ಆದ್ದರಿಂದ ಮಾನವೀಯತೆಯ ದೃಷ್ಟಿಯಿಂದ ಈ ಸಂಸ್ಥೆಯಲ್ಲಿ ವೈಟಿಂಗ್ ಲಿಸ್ಟ್‌ನಲ್ಲಿ ಇರತಕ್ಕ ಅಭ್ಯರ್ಥಿಗಳಿಗೆ ನೇಮಕಾತಿ ಆಜ್ಞೆಯನ್ನು ಕಳುಹಿಸಿಕೊಡಬೇಕೆಂದು ಸನ್ಮಾನ್ಯ ಆರೋಗ್ಯ ಸಚಿವೆಯವರಲ್ಲಿ ಕೋರುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಹಾಗೂ ತೋಟಗಾರಿಕೆ ಮಂತ್ರಿಗಳು) :– ಮಾನ್ಯ ಉಪಾಧ್ಯಕ್ಷರೇ, ತಮ್ಮ ಅನುಮತಿಯನ್ನು ಪಡೆದು ಮಾನ್ಯ ಆರೋಗ್ಯ ಸಚಿವೆಯವರ ಪರವಾಗಿ ಈ ಒಂದು ಹೇಳಿಕೆಯನ್ನು ಓದುತ್ತೇನೆ.

> 'ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿ ಒಟ್ಟು 13 ಕ್ಲರ್ಕ್ ಕಂ ಟೈಪಿಸ್ಟ್ ಹುದ್ದೆಗಳು ಖಾಲಿ ಇದ್ದು, 9 ಹುದ್ದೆಗಳು ನೇರ ನೇಮಕಾತಿ ಹುದ್ದೆಗಳು, 4 ಹುದ್ದೆಗಳು ಬಡ್ತಿ ಮುಖಾಂತರ ತುಂಬಬೇಕಾದ ಹುದ್ದೆಗಳಾಗಿವೆ. ನೇರ ನೇಮಕಾತಿ ಮುಖಾಂತರ ತುಂಬಬೇಕಾದ ಹುದ್ದೆಗಳನ್ನು ತುಂಬಲು ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟಣೆಯನ್ನು ದಿನಾಂಕ 15–12–1969ರಲ್ಲಿ ನೀಡಲಾಗಿತ್ತು. 1912 ಅಭ್ಯರ್ಥಿಗಳು ಸದರಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ್ದರು. ಅರ್ಜಿದಾರರು ಗಳಿಸಿದ ಶೇಕಡಾವಾರು ಅಂಕಗಳ ಆಧಾರದ ಮೇಲೆ, ಕನಿಷ್ಠ ವಿದ್ಯಾರ್ಹತೆ ಎಸ್.ಎಸ್.ಎಲ್.ಸಿ. ಮತ್ತು ಜ್ಯೂನಿಯರ್ ಟೈಪರೈಟಿಂಗ್ ಆಧಾರ ಇಟ್ಟುಕೊಂಡು, ಕರ್ನಾಟಕ ಸರ್ಕಾರ ಡೈರೆಕ್ಟೊರೇಟ್ ಮೆಂಟ್ ಸೆಲೆಕ್ಷನ್ ರೂಲ್ಸ್ 1973ರ ನಿಯಮ 5ರನ್ವಯ ಒಟ್ಟು 190 ಜನ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಯಿತು. ಈ ಪೈಕಿ 9 ಜನರನ್ನು ನೇಮಕಾತಿ ಪಟ್ಟಿಯಲ್ಲೂ ಮತ್ತು 18 ಅಭ್ಯರ್ಥಿಗಳನ್ನು ಹೆಚ್ಚುವರಿ ಪಟ್ಟಿಯಲ್ಲಿ ಇಡಲಾಯಿತು. ಚುನಾಯಿಸಲ್ಪಟ್ಟ 9 ಜನ ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದೆ.'

ಕಿದ್ವಾಯಿ ಸ್ಮಾರಕ ಗ್ರಂಥಿ ಸಂಸ್ಥೆಯಲ್ಲಿನ ನಿಯಮಾವಳಿಗಳ ಪ್ರಕಾರ ನೇರ ನೇಮಕಾತಿ ಹುದ್ದೆಗಳಿಗೆ ಅವಧಿ ಮುಗಿದ ನಂತರ ಕಾದಿರಿಸಿದ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಮುಂದೆ ಖಾಲಿಯಾಗಬಹುದಾದ ಹುದ್ದೆಗಳಿಗೆ ಜಾಹೀರಾತು ನೀಡದೆ ನೇಮಕಾತಿ ಮಾಡಲು ಬರುವುದಿಲ್ಲ.

(5) ಜಮೀನು ಮಾಲೀಕರುಗಳಿಂದ ಖಾತೆ–ಪಹಣಿ ಇತ್ಯಾದಿಗಳನ್ನು ಬರೆಯಲು ಹಣ ಪಡೆಯುತ್ತಿರುವ ಗ್ರಾಮ ಲೆಕ್ಕಿಗರು ಮತ್ತು ಉಪ–ತಹಸೀಲ್ದಾರ್‌ಗಳ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ.

ಶ್ರೀ ಎಂ. ಮಹದೇವ್ (ನಂಜನಗೂಡು) :– ಮಾನ್ಯ ಉಪಾಧ್ಯಕ್ಷರೇ, ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ನಾಡಕಚೇರಿಗಳ ಕಾರ್ಯ ವೈಖರಿಯು ತೃಪ್ತಿಕರವಾಗಿಲ್ಲದ ಕಾರಣ, ಇವುಗಳ ರದ್ದತಿಯ ಬಗ್ಗೆ ಸರ್ಕಾರದ ಸ್ಪಷ್ಟ